# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ,

ನಂ:16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು 560 052.

ಅಧಿಸೂಚನೆ

ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಸಿಓಎಸ್/ಡಿ/18-19/1314, ಬೆಂಗಳೂರು, ದಿನಾಂಕ 26.12.2018.

**ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS) (ಏಳನೇ ತಿದ್ದುಪಡಿ), 2018.**

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS), 2006 ಅನ್ನು 17ನೇ ಜೂನ್ 2006 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಲಾಯಿತು. ತರುವಾಯ, ಸರಬರಾಜು ಷರತ್ತುಗಳಿಗೆ ಕಾಲಕಾಲಕ್ಕೆ ಆರು ತಿದ್ದುಪಡಿಗಳನ್ನು ತಂದು ಅಧಿಸೂಚಿಸಲಾಯಿತು.

ಅಪರ ಮುಖ್ಯಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಬೆಸ್ಕಾಂ) ರವರು, ಸರಬರಾಜು ಷರತ್ತುಗಳ ಕೆಲವು ಖಂಡಗಳಿಗೆ ತಿದ್ದುಪಡಿ ತರುವಂತೆ ಕೋರಿ ಸಲ್ಲಿಸಿದ ಮನವಿಯು, ಆಯೋಗಕ್ಕೆ ಅಂಗೀಕಾರಾರ್ಹವೆಂದು ಕಂಡುಬಂದಿರುತ್ತದೆ. ತರುವಾಯ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಿಗೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡುವುದು ಅಗತ್ಯವೆಂದು ಆಯೋಗಕ್ಕೆ ಕಂಡುಬಂದಿದ್ದು, ಆಯೋಗವು, ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಸಿಓಎಸ್/ಡಿ/18-19, ಬೆಂಗಳೂರು, ದಿನಾಂಕ: 04.12.2018ರ ಮೂಲಕ, ದಿನಾಂಕ: 25.10.2018ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಕರಡು ತಿದ್ದುಪಡಿ (ಏಳನೇ ತಿದ್ದುಪಡಿ)ಯನ್ನು ಅಧಿಸೂಚಿಸಿತು. ಕರಡು ಅಧಿಸೂಚನೆಗಳನ್ನು ಆಯೋಗದ ಅಂತರ್ಜಾಲತಾಣ, www.karnataka.gov.in/kercರಲ್ಲಿ ಕೂಡ ಪ್ರಕಟಿಸಲಾಯಿತು. ಕರಡು ಅಧಿಸೂಚನೆಯ ಮಾಹಿತಿಯನ್ನು ಭಾಗಿದಾರರ, ಸಾರ್ವಜನಿಕರ / ಆಸಕ್ತ ವ್ಯಕ್ತಿಗಳ ಮಾಹಿತಿಗಾಗಿ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ಈ ಅಧಿಸೂಚನೆಯ ಮೂಲಕ,

ಸಾರ್ವಜನಿಕರ, ಆಸಕ್ತರಿಂದ, ಆಕ್ಷೇಪಣೆಗಳು / ಸಲಹೆ-ಸೂಚನೆಗಳು / ಅಭಿಪ್ರಾಯ-ಅನಿಸಿಕೆಗಳನ್ನು ಆಹ್ವಾನಿಸಲಾಯಿತು. ಕರಡು ಅಧಿಸೂಚನೆಯ ವಿಚಾರದಲ್ಲಿ, ಅನೇಕ ಭಾಗಿದಾರರು, ಸಾರ್ವಜನಿಕರು, ಆಸಕ್ತರು, ಆಕ್ಷೇಪಣೆಗಳು / ಸಲಹೆ-ಸೂಚನೆಗಳು / ಅಭಿಪ್ರಾಯ-ಅನಿಸಿಕೆಗಳನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ. ಆಯೋಗವು ಈ ವಿಷಯವಾಗಿ ದಿನಾಂಕ: 19.11.2018 ರಂದು 'ಸಾರ್ವಜನಿಕ ಅಹವಾಲು' ಸಭೆಯನ್ನು ಸಹ ನಡೆಸಿದೆ. ಭಾಗಿದಾರರಿಂದ ಬಂದ ಆಕ್ಷೇಪಣೆಗಳು / ಸಲಹೆ-ಸೂಚನೆಗಳು / ಅಭಿಪ್ರಾಯಗಳನ್ನು ಆಯೋಗವು ಪರಿಗಣಿಸಿದೆ.

ಆದ್ದರಿಂದ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, 2003ರ ವಿದ್ಯುಚ್ಛಕ್ತಿ ಅಧಿನಿಯಮ, (2003ರ ಕೇಂದ್ರ ಅಧಿನಿಯಮ ಸಂಖ್ಯೆ 36)ದ, ಪರಿಚ್ಛೇದ 16ರ ಜೊತೆಗೆ ಓದಲಾದ ಕ.ವಿ.ನಿ.ಆ (ವಿದ್ಯುತ್ ಸರಬರಾಜು ಕಂಪನಿಗಳಿಗೆ ಪರವಾನಗಿ ಷರತ್ತುಗಳು) ವಿನಿಯಮಗಳು, 2004ರ 7.3ನೇ ಷರತ್ತು ಹಾಗೂ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ಖಂಡ 46ರಡಿ ಪ್ರದತ್ತವಾದ ಅಧಿಕಾರ ಹಾಗೂ ಈ ಸಂಬಂಧ ದತ್ತವಾದ ಎಲ್ಲಾ ಅಧಿಕಾರವನ್ನು ಚಲಾಯಿಸಿ, 2006ರ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಿಗೆ ಈ ಕೆಳಕಂಡ ತಿದ್ದುಪಡಿಗಳನ್ನು ಮಾಡಿದೆ:

1. ಶೀರ್ಷಿಕೆ ಮತ್ತು ಪ್ರಾರಂಭ-

   a) ಈ ಷರತ್ತುಗಳನ್ನು, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS) (ಏಳನೇ ತಿದ್ದುಪಡಿ), 2018 ಎಂಬುದಾಗಿ ಕರೆಯಬಹುದಾಗಿದೆ.

   b) ಈ ಷರತ್ತುಗಳು, ಕರ್ನಾಟಕ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

   c) ಈ ಷರತ್ತುಗಳು, ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಿತರಣಾ ವ್ಯವಹಾರದಲ್ಲಿ ತೊಡಗಿರುವ ಎಲ್ಲಾ ಪರವಾನಿಗೆದಾರರಿಗೆ ಮತ್ತು ವಿದ್ಯುಚ್ಛಕ್ತಿ ಬಳಕೆದಾರರಿಗೆ ಅನ್ವಯಿಸುತ್ತದೆ.

2. **ತಿದ್ದುಪಡಿ ಮಾಡಲಾದ ಕೆಲವು ಖಂಡಗಳು–**

ಕೆಳಗಿನ ಕೋಷ್ಟಕದ ಅಂಕಣ – 2ರಲ್ಲಿ ನಮೂದಿಸಲಾದ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು, 2006ರ ಹಾಲಿ ಖಂಡಗಳನ್ನು, ಅಂಕಣ–3ರಲ್ಲಿ ಹೇಳಲಾದ ಖಂಡಗಳಿಗೆ ಬದಲಾಯಿಸಿಕೊಳ್ಳುವುದು.

| 1 | 2 | 3 |
|---|---|---|
| ಖಂಡ ಸಂಖ್ಯೆ | ಹಾಲಿ ಇರುವ ಷರತ್ತು | ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು |
| 4.02 (1) (iv) | ಅರ್ಜಿದಾರರು, ತಾವು ಯಾರಿಂದ ಒಳಾಂಗಣ ವೈರಿಂಗ್ ಕೆಲಸವನ್ನು ಮಾಡಿಸಿಕೊಳಲು ಉದ್ದೇಶಿಸಿರುವರೋ, ಅಂತಹ ಪರವಾನಿಗೆ ಪಡೆದ ವಿದ್ಯುಚ್ಛಕ್ತಿ ಗುತ್ತಿಗೆದಾರ (LEC)ನ ಹೆಸರು ಮತ್ತು ವಿಳಾಸವನ್ನು ಅರ್ಜಿ ನಮೂನೆಯಲ್ಲಿ ಬರೆಯಬೇಕು.<br><br>**ಸೂಚನೆ:** ಯಾವುದೇ ಆವರಣಕ್ಕೆ, ಗೃಹ ಮತ್ತು ವಾಣಿಜ್ಯ ಉದ್ದೇಶಕ್ಕೆ 7.5 ಕಿಲೋವ್ಯಾಟ್‌ಗಿಂತ ಕಡಿಮೆ ಸಾಮರ್ಥ್ಯದ ವಿದ್ಯುಚ್ಛಕ್ತಿ ಕೋರಿ ಅರ್ಜಿ ಸಲ್ಲಿಸುವ, ಯಾವುದೇ, ಅರ್ಜಿದಾರನಿಗೆ / ಗ್ರಾಹಕನಿಗೆ ಈ ಖಂಡವು ಅನ್ವಯಿಸುವುದಿಲ್ಲ. | ಅಳಿಸಿಹಾಕಲಾಗಿದೆ |
| 4.03 (ii) (d) | ವೈರಿಂಗ್ ನಕ್ಷೆಯೊಂದಿಗೆ, ಪರವಾನಗಿ ಪಡೆದ ವಿದ್ಯುಚ್ಛಕ್ತಿ ಗುತ್ತಿಗೆದಾರನಿಂದ, ಪೂರ್ಣಗೊಳಿಸಿದ ಹಾಗೂ ಪರೀಕ್ಷಾ ವರದಿ (ಕಂಪ್ಲೀಷನ್. ಕಂ. ಟೆಸ್ಟ್ ರಿಪೋರ್ಟ್) ಅನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು.<br><br>ಅರ್ಜಿದಾರನು, ಕಾರ್ಯಾದೇಶ ನೀಡುವ ಮುನ್ನ, ಸೋಲಾರ್ ವಾಟರ್ ಹೀಟರ್ ಅನ್ನು ಅಳವಡಿಸಿರುವ ಬಗ್ಗೆ ಸಾದಾ ಹಾಳೆಯಲ್ಲಿ ಮುಚ್ಚಳಿಕೆಯನ್ನು ಸಲ್ಲಿಸಬೇಕು. ಪರವಾನಿಗೆದಾರನು, ಮೇಲಿನ ದಸ್ತಾವೇಜುಗಳನ್ನು ಸ್ವೀಕರಿಸಿ, ಅವುಗಳನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ನೀಡಬೇಕು. | ವೈರಿಂಗ್ ನಕ್ಷೆಯೊಂದಿಗೆ, ಪರವಾನಗಿ ಪಡೆದ ವಿದ್ಯುಚ್ಛಕ್ತಿ ಗುತ್ತಿಗೆದಾರನಿಂದ, ಪೂರ್ಣಗೊಳಿಸಿದ ಹಾಗೂ ಪರೀಕ್ಷಾ ವರದಿ (ಕಂಪ್ಲೀಷನ್. ಕಂ. ಟೆಸ್ಟ್ ರಿಪೋರ್ಟ್) ಅನ್ನು ದ್ವಿಪ್ರತಿಯಲ್ಲಿ, ಒಳಾಂಗಣ ವೈರಿಂಗ್ ಕೆಲಸವನ್ನು ನಿರ್ವಹಿಸಿದ ಪರವಾನಗಿ ಪಡೆದ ವಿದ್ಯುಚ್ಛಕ್ತಿ ಗುತ್ತಿಗೆದಾರನ (LEC) ಹೆಸರು ಮತ್ತು ವಿಳಾಸವನ್ನು ಯುಕ್ತವಾಗಿ ನಮೂದಿಸಿ ಸಲ್ಲಿಸಬೇಕು.<br><br>ಅರ್ಜಿದಾರನು, ಕಾರ್ಯಾದೇಶ ನೀಡುವ ಮುನ್ನ, ಸೋಲಾರ್ ವಾಟರ್ ಹೀಟರ್ ಅನ್ನು ಅಳವಡಿಸಿರುವ ಬಗ್ಗೆ ಸಾದಾ ಹಾಳೆಯಲ್ಲಿ ಮುಚ್ಚಳಿಕೆಯನ್ನು ಸಲ್ಲಿಸಬೇಕು. ಪರವಾನಿಗೆದಾರನು, ಮೇಲಿನ ದಸ್ತಾವೇಜುಗಳನ್ನು ಸ್ವೀಕರಿಸಿ, ಅವುಗಳನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ನೀಡಬೇಕು. |

| 1 | 2 | 3 |
|---|---|---|
| ಖಂಡ ಸಂಖ್ಯೆ | ಹಾಲಿ ಇರುವ ಷರತ್ತು | ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು |
| 8.11 | ವಿದ್ಯುಚ್ಛಕ್ತಿ ಪರಿವೀಕ್ಷಣಾಲಯದಿಂದ ನೀಡಲಾಗುವ ತನ್ನ ವಿದ್ಯುಚ್ಛಕ್ತಿ ಸ್ಥಾವರದ ಅನುಮೋದನೆ ಪತ್ರದ ಪ್ರತಿ ಹಾಗೂ ಪರವಾನಿಗೆದಾರರಿಗೆ ಅಗತ್ಯವಿರುವ, ಅಳವಡಿಸಲಾದ ಸಾಧನ ಸಾಮಗ್ರಿಗಳ "ಪರೀಕ್ಷೆ ಮತ್ತು ಕಾರ್ಯಾರಂಭ ಬಗೆಗಿನ ದೃಢೀಕರಣ" ವನ್ನು ಹಾಜರುಪಡಿಸಿದ ಮೇಲೆ ಅರ್ಜಿದಾರನ ಸ್ಥಾವರಕ್ಕೆ ವಿದ್ಯುಚ್ಛಕ್ತಿ ಸಂಪರ್ಕವನ್ನು ನೀಡತಕ್ಕದ್ದು. | **ಸ್ವಾಧೀನ ದೃಢೀಕರಣ ಪತ್ರ**, ವಿದ್ಯುಚ್ಛಕ್ತಿ ಪರಿವೀಕ್ಷಣಾಲಯದಿಂದ ನೀಡಲಾಗುವ ತನ್ನ ವಿದ್ಯುಚ್ಛಕ್ತಿ ಸ್ಥಾವರದ ಅನುಮೋದನೆ ಪತ್ರದ ಪ್ರತಿ ಹಾಗೂ ಪರವಾನಿಗೆದಾರರಿಗೆ ಅಗತ್ಯವಿರುವ, ಅಳವಡಿಸಲಾದ ಸಾಧನ ಸಾಮಗ್ರಿಗಳ "ಪರೀಕ್ಷೆ ಮತ್ತು ಕಾರ್ಯಾರಂಭ ಬಗೆಗಿನ ಧೃಢೀಕರಣ" ವನ್ನು ಹಾಜರುಪಡಿಸಿದ ಮೇಲೆ ಅರ್ಜಿದಾರನ ಸ್ಥಾವರಕ್ಕೆ ವಿದ್ಯುಚ್ಛಕ್ತಿ ಸಂಪರ್ಕವನ್ನು ನೀಡತಕ್ಕದ್ದು.<br><br>ವಿವರಣೆ:<br>**ಸ್ವಾಧೀನ ದೃಢೀಕರಣ ಪತ್ರ ಎಂದರೆ ನೀರು, ನೈರ್ಮಲ್ಯ ಮತ್ತು ವಿದ್ಯುಚ್ಛಕ್ತಿಯಂಥ ಮೂಲಭೂತ ಸೌಕರ್ಯಕ್ಕೆ ಅವಕಾಶವಿರುವ, ಸ್ಥಳೀಯ ಕಾನೂನುಗಳಡಿ ಉಪಸಂಧಿಸಲಾದಂತೆ, ಕಟ್ಟಡದಲ್ಲಿ ವಾಸ ಯೋಗ್ಯತೆಗೆ ಅನುಮತಿಸಿ, ಸಕ್ಷಮ ಪ್ರಾಧಿಕಾರವು ನೀಡಿದ ದೃಢೀಕರಣ ಪತ್ರ ಅಥವಾ ಇನ್ನಾವುದಾದರೂ ಹೆಸರಿನಿಂದ ಕರೆಯಲ್ಪಡುವ ಇತರ ದೃಢೀಕರಣ ಪತ್ರ ಎಂದು ಅರ್ಥ.** ತರುವಾಯ, ಅಂಥ ಸ್ವಾಧೀನ ದೃಢೀಕರಣ ಪತ್ರವನ್ನು ಹಾಲಿ ಕಟ್ಟಡದ ಯಾವುದೇ ಹೆಚ್ಚುವರಿ ಮಹಡಿಗಳ ಅಥವಾ ಹೆಚ್ಚುವರಿ ನಿರ್ಮಿತ ಪ್ರದೇಶದ ವಿದ್ಯುಚ್ಛಕ್ತಿ ಸಂಪರ್ಕಕ್ಕೆ ಕೂಡ ಒದಗಿಸತಕ್ಕದ್ದು. |
| 25.01 | ಯಾವುದೇ ವಿದ್ಯುಚ್ಛಕ್ತಿ ಸ್ಥಾವರಕ್ಕೆ, ಮಾಪಕವನ್ನು ಅಳವಡಿಸದೆ ವಿದ್ಯುತ್ ಸಂಪರ್ಕ ನೀಡಬಾರದು.<br>ಸೂಚನೆ:<br>a) xxxx<br>b) xxxx<br>c) xxxx<br>d) xxxx | ಯಾವುದೇ ವಿದ್ಯುಚ್ಛಕ್ತಿ ಸ್ಥಾವರಕ್ಕೆ, ಮಾಪಕವನ್ನು ಅಳವಡಿಸದೆ ವಿದ್ಯುತ್ ಸಂಪರ್ಕ ನೀಡಬಾರದು.<br>ಸೂಚನೆ:<br>a) xxxx<br>b) xxxx<br>c) xxxx<br>d) xxxx<br>e) ಸಾರ್ವಜನಿಕ ನೀರು ಸರಬರಾಜು, ಸಾರ್ವಜನಿಕ ದೀಪಗಳು (ಬೀದಿ ದೀಪಗಳು) ಹಾಗೂ ಸರ್ಕಾರಿ ಕಛೇರಿಗಳ ವಿದ್ಯುಚ್ಛಕ್ತಿ ಸ್ಥಾವರಗಳಿಗೆ, ಪೂರ್ವ-ಪಾವತಿ ವಿದ್ಯುತ್ ಮಾಪಕಗಳನ್ನು ಅಳವಡಿಸಿಕೊಳ್ಳಲು ಇಚ್ಛಿಸಿದಲ್ಲಿ, ಪೂರ್ವ-ಪಾವತಿ ವಿದ್ಯುತ್ ಮಾಪಕಗಳನ್ನು ಅಳವಡಿಸುವುದು. |

| 1 | 2 | 3 |
|---|---|---|
| ಖಂಡ ಸಂಖ್ಯೆ | ಹಾಲಿ ಇರುವ ಷರತ್ತು | ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು |
| | | ಜೊತೆಗೆ, ಪೂರ್ವ-ಪಾವತಿ ವಿದ್ಯುತ್ ಮಾಪಕಗಳನ್ನು, ವಿದ್ಯುತ್ ಸರಬರಾಜು ಕಂಪನಿಗಳು ಒದಗಿಸಿದ್ದಾದಲ್ಲಿ, ಪೂರ್ವ-ಪಾವತಿ ವಿದ್ಯುತ್ ಮಾಪಕದ ವೆಚ್ಚಕ್ಕೆ ಸರಿಸಮನಾದ ಮಾಪಕ ಭದ್ರತಾ ಠೇವಣಿ (MSD)ಯನ್ನು ಅಂಥಹ ಗ್ರಾಹಕನು ಪಾವತಿಸತಕ್ಕದ್ದು.<br>ಅದರ ಜೊತೆಗೆ, ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಲ್ಲಿ ಅಥವಾ ಆಯೋಗವು ಹೊರಡಿಸಿದ ಇತರ ಯಾವುದೇ ವಿನಿಮಯಗಳಲ್ಲಿ ಒಳಗೊಂಡಿರುವ ನಿಬಂಧನೆಗಳು ಏನೇ ಇದ್ದರೂ, ವಿತರಣಾ ಪರವಾನಿಗೆದಾರರು ಅಂಥ ಗ್ರಾಹಕರ ವಿದ್ಯುಚ್ಛಕ್ತಿ ಸ್ಥಾವರದಲ್ಲಿ, ಹಾಲಿ ಅಳವಡಿಸಲಾದ ಯಾವುದೇ ಎಲೆಕ್ಟ್ರೋ-ಮೆಕಾನಿಕಲ್ / ಎಲೆಕ್ಟ್ರಾನಿಕ್ ವಿದ್ಯುತ್ ಮಾಪಕಗಳನ್ನು ವಾಪಸ್ ಖರೀದಿ (buy back) ಮಾಡತಕ್ಕದ್ದು.<br>ಪೂರ್ವ ಪಾವತಿ ವಿದ್ಯುತ್ ಮಾಪಕವನ್ನು ವಿತರಣಾ ಪರವಾನಿಗೆದಾರರು ಒದಗಿಸಿದ್ದಲ್ಲಿ, ಹಾಲಿಯಿರುವ ವಿದ್ಯುತ್ ಮಾಪಕದ ಸವಕಳಿ ಮೌಲ್ಯ ಮತ್ತು ಹೊಸ ಪೂರ್ವ-ಪಾವತಿ ವಿದ್ಯುತ್ ಮಾಪಕದ ವೆಚ್ಚಕ್ಕೆ ಸರಿಸಮಾನದ ಮೀಟರ್ ಭದ್ರತಾ ಠೇವಣಿಯ ನಡುವಿನ ವ್ಯತ್ಯಾಸವನ್ನು, ಐದು ವರ್ಷಗಳ ಅವಧಿಯಲ್ಲಿ, ಸಮಾನ ವಾರ್ಷಿಕ ಕಂತುಗಳಲ್ಲಿ ಸಂಬಂಧಿಸಿದ ಗ್ರಾಹಕನು ವಿತರಣಾ ಪರವಾನಿಗೆದಾರನಿಗೆ ಪಾವತಿಸತಕ್ಕದ್ದು. |

ಆಯೋಗದ ಆದೇಶದ ಮೇರೆಗೆ,

ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ